**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

| |
|---|
| **ಕೇಳಿಕೆ ಹಾಳೆ** |
| **ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ 140/2015**

ಪ್ರಾಸಾ- 24 ಚಾಸಾ- 38

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಆನಂದ ಶೆಟ್ಟಿ |
| ತಂದೆಯ ಹೆಸರುಃ | ಃ | ರಾಮಣ್ಣ ಶೆಟ್ಟಿ |
| ವಯಸ್ಸುಃ | ಃ | 67 ವರ್ಷ |
| ಉದ್ಯೋಗಃ | ಃ | ನಿವೃತ್ತ ಶಾಖಾ ವ್ಯವಸ್ಥಾಪಕರು, |
| ವಾಸಃ | ಃ | ಕೋಟ, ಬ್ರಹ್ಮಾವರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 15-11-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2013 ರಿಂದ 2016ರವರೆಗೆ ಶಾಖಾ ವ್ಯವಸ್ಥಾಪಕನಾಗಿ ನ್ಯೂ ಇಂಡಿಯಾ ಅಷ್ಯೂರೆನ್ಸ್ ಕಂಪೆನಿ, ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. 2013 ರಲ್ಲಿ ಲೋಕಾಯುಕ್ತ ಪೊಲೀಸ್ ಹಾಸನದಿಂದ ನನಗೆ ಒಂದು ಪತ್ರ ಬಂದಿತ್ತು. ಸದರಿ ಪತ್ರದಲ್ಲಿ, ಕೆಎ-13-ಡಬ್ಲ್ಯೂ-5674 ಹೋಂಡಾ ಆ್ಯಕ್ಟೀವಾ ಮೋಟಾರ್ ಸೈಕಲ್ ಗೆ ಕಟ್ಟಿರುವ ವಿಮಾದ ಮಾಹಿತಿಯನ್ನು ಕೇಳಿದ್ದರು. ಸದರಿ ಪತ್ರ ಈಗ ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ-132 ಎಂದು ಗುರುತಿಸಲಾಯಿತು. ಆ ಪ್ರಕಾರ ನಮ್ಮ ಪತ್ರ 28.11.2013ರಂತೆ 3 ವರ್ಷದ ಸದರಿ ವಾಹನಕ್ಕೆ ಸಂಬಂಧಿಸಿದ ವಿವರವನ್ನು ನೀಡಿರುತ್ತೇನೆ. ನಾನು ನೀಡಿದ ಪತ್ರವನ್ನು

ಈಗ ನೋಡಿ ಗುರುತಿಸಿದ್ದೇನೆ. ಸದರಿ ನನ್ನ ಪತ್ರವನ್ನು ನಿಪಿ-133 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-133(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

ನಿಪಿ-133ನ್ನು ನಮ್ಮ ಇನ್ಸುರೆನ್ಸ ಕಛೇರಿಯಲ್ಲಿ ಲಭ್ಯವಿದ್ದ ದಾಖಲಾತಿಗಳ ಆಧಾರದ ಮೇಲೆ ನೀಡಿದ್ದೇನೆ. ನಿಪಿ-133ರೊಂದಿಗೆ ನಾನು ಪರಿಗಣಿಸಿದ ದಾಖಲಾತಿಗಳ ಪ್ರತಿಗಳನ್ನು ಕಳುಹಿಸಿಕೊಟ್ಟಿಲ್ಲ. ನಾನು ಯಾವುದೇ ದಾಖಲಾತಿಗಳನ್ನು ಪರಿಗಣಿಸದೇ ಇದ್ದುದರಿಂದಲೇ ನಿಪಿ-133ರೊಂದಿಗೆ ನಾನು ಪರಿಗಣಿಸಿದ್ದೇನೆ ಎಂದು ಹೇಳಿದ ದಾಖಲಾತಿಗಳ ಪ್ರತಿಗಳನ್ನು ಲೋಕಾಯುಕ್ತ ಕಛೇರಿಗೆ ಕೊಟ್ಟುಕಳುಹಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**